ಗೆಳೆಯರು ಇವನನ್ನು ಕಂಡರೆ ಸಾಕು ಮೆತ್ತಗೆ ಜಾಗ ಖಾಲಿ ಮಾಡುತ್ತಿದ್ದರು. ನೆಮ್ಮದಿಯಿಂದ ಜೀವನ ಮಾಡಬೇಕೆಂಬ ಅವನ ಯೋಜನೆ ಉಲ್ಟಂಪಲ್ಟಾ ಆಗಿತ್ತು. ಆದರೆ ದೂರುವುದಾದರೂ ಯಾರಿಗೆ? ಬೇಸತ್ತು ತಿರುಗಿ ಮಾತನಾಡಿದರೆ ಸಾಕು, ದಾಕ್ಷಾಯಿಣಿ “ನನ್ನನ್ನು ಸಾಕಲಾಗುವುದಿಲ್ಲವೇ ನಿಮಗೆ? ನಾನು ತವರಿಗೆ ಹೊರಟು ಬಿಡುತ್ತೇನೆ. ಅಪ್ಪನ ಮನೆಯಲ್ಲಿ ನನಗೂ ನನ್ನ ಮಕ್ಕಳಿಗೂ ಜಾಗ ಉಂಟು” ಎಂದು ದಬಾಯಿಸುತ್ತಿದ್ದಳು. ಶಿವಾನಂದ ಮೆತ್ತಗಾಗುತ್ತಿದ್ದ. ‘ಅಪ್ಪನಿಗೆ ದೂರಿತ್ತರೆ ಅದು ಸ್ವಾಮಿಗಳವರೆಗೂ ಹೋಗುತ್ತದೆ. ಅಲ್ಲಿ ಕರೆಸಿ ವಿಚಾರಣೆ ನಡೆಸುತ್ತಾರೆ. ಏನೆಂದು ಹೇಳುವುದು?’ ಎಂದು ಚಿಂತಿಸಿ ಮೌನವಾಗಿ ಮತ್ತೆ ಸಾಲಕ್ಕೆ ತಲೆ ಬಾಗುತ್ತಿದ್ದ.

ಇದು ಕತೆಯ ಹಿನ್ನೆಲೆ. ನಿಮಗೆ ತಿಳಿದಿರಲಿ ಎಂದು ಹೇಳುತ್ತಿದ್ದೇನಷ್ಟೆ. ಕಾರು ಬುಕ್ ಮಾಡಿದ್ದಾಯಿತು. ಕಲಿತದ್ದೂ ಆಯಿತು. ಶುಭ ಮುಹೂರ್ತದಲ್ಲಿ ಕಾರು ಮನೆಗೆ ಬಂತು. ಲೈಸನ್ಸೂ ಸಿಕ್ಕಿ ಬೆಂಗಳೂರಿನ ಬೀದಿಗಳಲ್ಲಿ ಪರವಾಗಿಲ್ಲ ಎಂಬಂತೆ ಶಿವಾನಂದ ಓಡಿಸಲಾರಂಭಿಸಿದ. ‘ಆಯ್ತಲ್ಲ, ಇನ್ನೇನು ಕತೆ’ ಎನ್ನಬೇಡಿ. ಇಲ್ಲಿಂದಲೇ ನಿಜವಾದ ಕತೆ ಆರಂಭವಾಗುವದು. ನೀಲೇಶನ ಮಗನ ಬರ್ತಡೇ ‘ಹರ್ಷಾ’ ಹೋಟೆಲ್‌ನಲ್ಲಿ ಇಟ್ಟುಕೊಂಡ ಬಗ್ಗೆ ಫೋನ್ ಕರೆ, ಮೆಸೇಜುಗಳೆರಡೂ ತಲುಪಿದವು. ದಾಕ್ಷಾಯಿಣಿ ಜರ್ದೋಸಿ ಸೀರೆಯುಟ್ಟು ಅದಕ್ಕೊಪ್ಪುವ ಆಭರಣ ತೊಟ್ಟು ಸಿದ್ಧವಾದಳು. ಹೊಸ ಕಾರಿನೊಂದಿಗೆ ಎಲ್ಲರಿಗೂ ‘ಸರ್‌ಪ್ರೈಸ್’ ಕೊಡಲು ಉತ್ಸುಕಳಾದಳು. ಮಗುವಿಗೆ ಚಿನ್ನದುಂಗುರದ ಉಡುಗೊರೆಯೊಂದಿಗೆ ಹೋಗಿ ಹೋಟೆಲ್ ಮುಂದೆ ಇಳಿದಿದ್ದೇ ತಡ, “ಅರೆ ದಾಕ್ಷಾ, ಹೊಸಾ ಕಾರು ತಗೊಂಡ್ಯಾ? ಯಾವಾಗ್ಲೇ? ಹೇಳೇ ಇಲ್ಲ?” ಎಂಬಿತ್ಯಾದಿ ಪ್ರಶ್ನೆಗಳನ್ನು ಎಸೆಯುತ್ತಾ ಎಲ್ಲರೂ ಬೂದು ಬಣ್ಣದ ಕಾರಿನ ಮುಂದೆ ಜಮಾಯಿಸಿದರು. ದಾಕ್ಷಾಯಿಣಿಗೆ ಹೆಮ್ಮೆ, ಆನಂದ, ಕಂಗಳಲ್ಲಿ ಏನೋ ಸಾಧಿಸಿದ ಭಾವ. “ತೊಗೊಳ್ಳೋದು ತೊಗೊಂಡೆ. ಬೇಸಿಕ್ ಮಾಡೆಲ್ ಯಾಕೆ ಚೂಸ್ ಮಾಡ್ದೆ? ಒಳ್ಳೆ ಹೈ ಎಂಡ್ ಗಾಡೀನೆ ತೊಗೊಬಹುದಿತ್ತಲ್ಲ? ಹೇಗೂ ನಿಮ್ಮ ಬ್ಯಾಂಕಿನಲ್ಲಿ ಸಾಲ ಸಿಗುತ್ತೆ. ಅಟ್ ಲೀಸ್ಟ್ ಸ್ವಿಫ್ಟ್ ಡಿಸೈರ್, ಎರ್ಟಿಗಾ...” ಎಂದು ಚಿಕ್ಕಮ್ಮ ಕೇಳೇಬಿಟ್ಟರು. ಅಷ್ಟೇ ಸಾಕಾಯ್ತು. ಬಲೂನಿನಂತೆ ಉಬ್ಬಿದ ಅವಳ ಮುಖ ಇಳಿದು ಹೋಯಿತು. ‘ಬೇಸಿಕ್ ಮಾಡೆಲ್’ಎಂಬ ಶಬ್ದ ಅವಳ ಮನವನ್ನೆಲ್ಲ ದಹಿಸಿತು. ಕಾರು ಆರಿಸುವಾಗ ತಾನು ಹೋಗದೇ ತಪ್ಪು ಮಾಡಿದೆ ಎನಿಸಿತು. ಮುಂದೆ... ಬರ್ತಡೇ ಪಾರ್ಟಿಯೆಲ್ಲ ಸಪ್ಪಗಾಯಿತು.

ಮನೆಗೆ ಬಂದ ನಂತರ ಬಡಪಾಯಿ ಜೀವಕ್ಕೆ ಮತ್ತೆ ಆಪತ್ತು ಬಂತು. “ಸರಿಯಾಗಿ ನೋಡಿ ವಿಚಾರಿಸಿ ಬುಕ್ ಮಾಡ್ಬಾರ್ದಿತ್ತಾ? ಬೇಸಿಕ್ ಮಾಡೆಲ್ ತಂದಿದ್ದೀರಿ. ನಿಮ್ಮ ಚಾಯ್ಸೇ ಸರಿಯಾಗಿಲ್ಲ. ಹೈ ಸೊಸೈಟಿಯ ಟೇಸ್ಟಿಲ್ಲ ನಿಮಗೆ?” ಎಂದು ಚುಚ್ಚಿದಳು. ‘ಅದಕ್ಕೇ ನಿನ್ನ ಮದುವೆಯಾಗಿದ್ದು’ ಎಂದು ಮನದಲ್ಲೇ ಹೇಳಿಕೊಂಡು ಸುಮ್ಮನಾದ ಶಿವಾನಂದ. “ಈಗ ಡಿಸೈರ್ ಅಂದ್ರಲ್ಲ, ಅದಕ್ಕೆಷ್ಟಾಗುತ್ತೆ ಕೇಳಿ. ನನ್ನ ನೆಕ್ಲೇಸು, ಮಕ್ಕಳ ಚೈನು ಕೊಡ್ತೀನಿ. ಮಾರೋಣವಂತೆ. ನಂತರ ಮತ್ತೆ ಮಾಡಿಸಿದರಾಯಿತು. ಈಗ ಒಳ್ಳೆ ಹೈ ಎಂಡ್ ಮಾಡೆಲ್ ಗಾಡಿ ತಂದರಾಯಿತು” ಎಂದು ಶುರು ಮಾಡಿದಳು. “ಮಾರಾಯ್ತಿ, ನಿನ್ನ ನೆಕ್ಲೇಸು ಹೆಚ್ಚೆಂದರೆ ಐವತ್ತರಿಂದ ಅರವತ್ತು ಸಾವಿರವಾದೀತು. ಅಷ್ಟ್ರಿಂದ ಏನಾಗುತ್ತೆ? ಹೈ ಎಂಡ್ ಗಾಡಿ ಯಾವುದೂ ಎಂಟು, ಹತ್ತು ಲಕ್ಷಕ್ಕೆ ಕಮ್ಮಿ ಇಲ್ಲ. ತೊಗೊಂಡಾಗಿದೆಯಲ್ಲ” ಎಂದು ನಕ್ಕನಷ್ಟೇ. ಮಕ್ಕಳು ಏನೂ ಅರ್ಥವಾಗದೇ ಪೆಚ್ಚುಪೆಚ್ಚಾಗಿ ಕಾರನ್ನೊಮ್ಮೆ, ಅಮ್ಮ ಅಪ್ಪನನ್ನೊಮ್ಮೆ ಪಿಳಿಪಿಳಿ ನೋಡುತ್ತಿದ್ದವು.